ಡಾ|| ಎಂ. ಶಂಕರನಾಯಕ್ : ಅಲ್ಲಿ ಹಿಂದಿನಿಂದಲೂ ಕರ್ನಾಟಕದ ಒಬ್ಬ ಸದಸ್ಯರು ಇದ್ದಾರೆ. ಕರ್ನಾಟಕವನ್ನು ಪ್ರತಿನಿಧಿಸುವವರೊಬ್ಬರು ಈಗಲೂ ಇದ್ದಾರೆ. ಒಬ್ಬರಿಗಿಂತ ಹೆಚ್ಚು ಮಾಡಲು ಏನಾದರೂ ಅವರು ಇಚ್ಛಿಪಟ್ಟರೆ ಅದರ ಬಗ್ಗೆ ಪರಿಶೀಲಿಸಿ ತಾವು ಹೇಳಿದ ಹಾಗೆ ಆಂಧ್ರಪ್ರದೇಶ ಸರ್ಕಾರದೊಡನೆ ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿಗೆ ನಮ್ಮ ಆದಾಯವೇ ಜಾಸ್ತಿ ಹೋಗುತ್ತಿದೆ. ನಮ್ಮ ಕೊಡುಗೆಯೇ ಜಾಸ್ತಿ. ಆದ್ದರಿಂದ,ಕನಿಷ್ಠ ಶೇ 40 ಭಾಗವಾದರೂ ಆ ಸಮಿತಿಯಲ್ಲಿ ನಮಗೆ ಅವಕಾಶ ಕೊಡಬೇಕೆಂಬುದು ನಮ್ಮ ಒತ್ತಾಯ.

ಡಾ|| ಎಂ. ಶಂಕರನಾಯಕ್ : ಒತ್ತಾಯ ತಂದು, ಎಷ್ಟು ಕೊಡಲು ಸಾಧ್ಯವೋ ಅಷ್ಟು ಮಾಡುತ್ತೇವೆ.

ಮುಜರಾಯಿ ದೇವಸ್ಥಾನಗಳ ಅಭಿವೃದ್ಧಿ

187 - ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆರ್ಥಿಕವಾಗಿ ಸಂಪನ್ಮೂಲಗಳಿಲ್ಲದೆ ಪೂಜೆ ವಿನಿಯೋಗಗಳಿಗೆ ಕಷ್ಟವಾಗಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು? ಅವುಗಳಿಗೆ ಆರ್ಥಿಕ ಶಕ್ತಿ ಕೊಡಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳಾವುವು?*

ಆ) *ದೇವಸ್ಥಾನದ ಅರ್ಚಕರಿಗೆ, ಸಿಬ್ಬಂದಿವರ್ಗದವರುಗಳಿಗೆ ಕನಿಷ್ಠ ವೇತನವನ್ನು ಸರ್ಕಾರ ನಿಗಧಿಪಡಿಸಿದೆಯೇ?*

ಇ) *ಹಾಗಿಲ್ಲದಿದ್ದಲ್ಲಿ ಯಾವಾಗ ನಿಗಧಿ ಪಡಿಸಲಾಗುವುದು?*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ಗ್ರಾಮಾಂತರ ಪ್ರದೇಶಗಳಲ್ಲಿನ ಆರ್ಥಿಕ ಸಂಪನ್ಮೂಲಗಳಿಲ್ಲದೆ ಸು.24,229 ಧಾರ್ಮಿಕ ಸಂಸ್ಥೆಗಳು ಮತ್ತು ದೇವಾಲಯಗಳಿವೆ. ಉದ್ದೇಶಿತ ಏಕರೂಪ ಮಸೂದೆಯಲ್ಲಿ ಇಂಥ ಸಂಸ್ಥೆಗಳಿಗೆ ಆರ್ಥಿಕ ಸಹಾಯ ಒದಗಿಸಲು ಕಾಮನ್‌ಪೂಲ್ ಫಂಡ್ ಎಂಬ ನಿಧಿ ಸ್ಥಾಪಿಸಲು ಅವಕಾಶ ಮಾಡಲಾಗಿದೆ.

ಆ) ಇಲ್ಲ, ಆಯಾ ಕಾಯ್ದೆಗಳಲ್ಲಿ ಸೂಚಿಸಿರುವ ಸಕ್ಷಮ ಪ್ರಾಧಿಕಾರಗಳು ಸ್ಕೇಲನ್ನು (ಆಯವ್ಯಯ) ಅನುಮೋದಿಸುವಾಗ ಆಯಾ ದೇವಸ್ಥಾನದ ಆದಾಯಕ್ಕೆ ಅನುಗುಣವಾಗಿ ಅರ್ಚಕರು ಮತ್ತು ಇತರೆ ಸಿಬ್ಬಂದಿಯವರಿಗೆ ವೇತನ ನಿಗಧಿಪಡಿಸುವರು.

ಇ) - ಪ್ರಶ್ನೆ ಉದ್ಭವಿಸುವುದಿಲ್ಲ -

ಶ್ರೀ ಎನ್. ಯೋಗೀಶ್ ಭಟ್ : ಗ್ರಾಮಾಂತರ ಪ್ರದೇಶಗಳಲ್ಲಿ ಸಂಪನ್ಮೂಲಗಳಿಲ್ಲದ ಸುಮಾರು 24,229 ಧಾರ್ಮಿಕ ಸಂಸ್ಥೆಗಳು ಹಾಗೂ ದೇವಾಲಯಗಳಿವೆ. ಉದ್ದೇಶಿತ ಏಕರೂಪಾದ ಮಸೂದೆಯಲ್ಲಿ ಇಂಥ ಸಂಸ್ಥೆಗಳಿಗೆ ಆರ್ಥಿಕ ಸಹಾಯ ಒದಗಿಸಲು, ಕಾಮನ್ ಪೂಲ್ ಫಂಡ್ ಎಂಬ ನಿಧಿ ಸ್ಥಾಪಿಸಲು 97-98ರಲ್ಲಿ ಅವಕಾಶ ಮಾಡಲಾಗಿದೆ. ಅದೇ ರೀತಿ, 98-99ರಲ್ಲಿ ಎಷ್ಟು ಹಣವನ್ನು ಕಾಮನ್ ಪೂಲ್ ಫಂಡ್ ಇದರಲ್ಲಿ ಇಟ್ಟಿದ್ದೀರಿ? ಎಷ್ಟು ದೇವಸ್ಥಾನಗಳಿಗೆ ಆರ್ಥಿಕ ಸಹಾಯವನ್ನು ತಾವು ಮಾಡಿದ್ದೀರಿ? ಈ ವಿವರ ಕೊಡಬೇಕು.

ಡಾ|| ಎಂ. ಶಂಕರನಾಯಕ್ (ಮುಜರಾಯಿ ಸಚಿವರ ಪರವಾಗಿ) : ಕಾಮನ್ ಪೂಲ್ ಫಂಡ್ ಶಾಸನವೇ ಆಗಿಲ್ಲ. ಅದಾದನಂತರ, ನಿಗದಿಯಾಗುತ್ತದೆ.

ಶ್ರೀ ಎನ್. ಯೋಗೀಶ್ ಭಟ್ : ಕನಿಷ್ಠ ವೇತನಕ್ಕೆ ಸಂಬಂಧಿಸಿದಂತೆ ನಾನು ಪ್ರಶ್ನೆ ಕೇಳಿದ್ದೆ. ಇಲ್ಲಿ ಕೊಟ್ಟ ಉತ್ತರದಲ್ಲಿ ಆದಾಯಕ್ಕನುಗುಣವಾಗಿ ಎಂದು ಹೇಳಿದ್ದಾರೆ. ಎಷ್ಟು ಆದಾಯಕ್ಕನುಗುಣವಾಗಿ ಕನಿಷ್ಠ ವೇತನ ನಡೆಯುತ್ತಿದೆ? ಆದಾಯದ ಲಿಮಿಟ್ ಎಷ್ಟೆಂದು ಹೇಳಿ.

ಡಾ|| ಎಂ. ಶಂಕರನಾಯಕ್ : ನಾನು ಆಗಲೇ ಹೇಳಿದೆ. ಮಲೆ ಮಹದೇಶ್ವರ, ಶ್ರೀಕಂಠೇಶ್ವರದಂತಹ ಮೇಜರ್ ದೇವಸ್ಥಾನಗಳಲ್ಲಿ ಸರ್ಕಾರಿ ಸಿಬ್ಬಂದಿಗೆ ಅವರೇ ವೇತನ ಕೊಡುತ್ತಿದ್ದಾರೆ. ಉಳಿದ ದೇವಸ್ಥಾನಗಳಿಗೆ ಅವರ ಆದಾಯಕ್ಕನುಗುಣವಾಗಿ ದೇವಸ್ಥಾನದವರೇ ಕೆಲವರಿಗೆ 500 ರೂ. ಇರಬಹುದು, 250 ರೂ. ಇರಬಹುದು, ಎಷ್ಟೆಂದು ನಿಗದಿಯಾಗಿಲ್ಲ. ಒಂದು ವೇಳೆ ಆದಾಯ ಹೆಚ್ಚಾದಾಗ 3 ವರ್ಷಗಳಿಗೊಮ್ಮೆ ವೇತನವನ್ನೂ ಹೆಚ್ಚು ಮಾಡುವ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಈಗೇನು ಕಾಮನ್ ಪೂಲ್ ಫಂಡ್ ಬರುತ್ತದೆ, ಅದು ಬಂದಾಗ ಅವರಿಗೆಲ್ಲರಿಗೂ ಸಮನಾದ ವೇತನ ಕೊಡಲು ಇದರಲ್ಲಿ ಅವಕಾಶ ಮಾಡುತ್ತೇವೆ. ಅದಕ್ಕೆ ನಿಯಮಾವಳಿಗಳನ್ನು ನಾವು ಮಾಡಿಕೊಂಡು ಅದರ ಪ್ರಕಾರ ಅದರಲ್ಲಿ ಹಂಚಿಕೆ ಮಾಡಬೇಕಾಗುತ್ತದೆ. ಅದಾಗುವವರೆಗೂ ನಿರ್ದಿಷ್ಟವಾಗಿ ಇಂಥಿಂಥ ದೇವಸ್ಥಾನಗಳಿಗೆ ಇಷ್ಟೇ ಎಂದು ಹೇಳಲು ಬರುವುದಿಲ್ಲ.

ಬಸವಕಲ್ಯಾಣದಲ್ಲಿ ನಗರ ಸಾರಿಗೆ ಬಸ್ಸುಗಳ ಸಂಚಾರ

188 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ (ಬಸವ ಕಲ್ಯಾಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ನಗರ ಸಾರಿಗೆ ಬಸ್‌ಗಳ ಓಡಾಟವನ್ನು ಪ್ರಾರಂಭಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಪ್ರತಿದಿನ ಓಡಾಡುತ್ತಿರುವ ನಗರ ಸಾರಿಗೆ ಬಸ್‌ಗಳ ಸಂಖ್ಯೆ ಎಷ್ಟು?

ಇ) ಈ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರದವರು ಕೈಕೊಳ್ಳಲಿರುವ ಕ್ರಮಗಳೇನು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಇಲ್ಲಾ.